# ಧರ್ಮೋಪದೇಶಕಾಂಡಕ್ಕೆ ಪೀಠಿಕೆ



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಯೆಶಾಯ 14:12–14, ಯೆಹೆಜ್ಕೇಲನು 28:12–17, ಆದಿಕಾಂಡ 12:1–3, ಅಪೊಸ್ತಲರ ಕೃತ್ಯಗಳು 7:20–36, ವಿಮೋಚನಕಾಂಡ 19:4–8.

**ಸ್ಮರಣವಾಕ್ಯ : "ಪ್ರೀತಿಯಿಲ್ಲದವನು ದೇವರನ್ನು ಬಲವನಲ್ಲ. ಯಾಕೆಂದರೆ ದೇವರು ಪ್ರೀತಿಸ್ವರೂಪಿಯು"** (1 ಯೋಹಾನ 4:8).

ಧರ್ಮೋಪದೇಶಕಾಂಡ ಪುಸ್ತಕವು ಖಂಡಿತವಾಗಿಯೂ ನಿರ್ವಾತದಲ್ಲಿ ಏಳಲಿಲ್ಲ, ಜೀವನದಲ್ಲಿ ಹೇಗೆ ಎಲ್ಲವನ್ನೂ ಒಳಗೊಂಡಿದೆಯೋ ಹಾಗೇ ಧರ್ಮೋಪದೇಶ ಕಾಂಡಕ್ಕೆ ಸನ್ನಿವೇಶ ಇದೆ. ಆ ಸನ್ನಿವೇಶದಲ್ಲಿ ಧರ್ಮೋಪದೇಶಕಾಂಡ ಪುಸ್ತಕವನ್ನು ಅರ್ಥಮಾಡಿಕೊಳ್ಳಲು ಪ್ರಮುಖ ಪಾತ್ರವನ್ನು ವಹಿಸಿದೆ.

ಬಹಳಷ್ಟು ಇತಿಹಾಸವನ್ನು ಒಳಗೊಂಡಿದೆ – ಈ ಪುಸ್ತಕದ ಪರಿಸ್ಥಿತಿಯನ್ನು ವಿವರಿಸುವುದಲ್ಲದೆ, ಅದರ ಲೋಕವನ್ನು ಸೃಷ್ಟಿಸಿದ ಸನ್ನಿವೇಶವನ್ನು ಮತ್ತು ಪರಿಸರವನ್ನು ಒಳಗೊಂಡಿದೆ. ಧರ್ಮೋಪದೇಶಕಾಂಡ ಮತ್ತು ಪ್ರಸ್ತುತಕಾಲದ ಸತ್ಯದ ಸನ್ನಿವೇಶವನ್ನು ಅರ್ಥಮಾಡಿಕೊಳ್ಳುವುದು ಕಠಿಣವಾಗಿದೆ.

ಯಾರೋ ಒಬ್ಬರು ರಷ್ಯಾ ದೇಶದ ಲಿಯೋ ಟಾಲ್‌ಸ್ಟ್ರಾಂಯ್‌ರವರ "ಯುದ್ಧ ಮತ್ತು ಶಾಂತಿ" ಎಂಬ 1500 ಪುಟದ ಲೇಖನವನ್ನು 3 ದಿನಗಳಲ್ಲಿ ಓದಿ ಮುಗಿಸಿದರು. ಆ ಪುಸ್ತಕದಲ್ಲಿ ಇರುವುದೇನು? ಎಂದು ಯಾರೋ ಪ್ರಶ್ನಿಸಿದರು.

---

* ಈ ವಾರದ ಪಾಠವನ್ನು ಅಕ್ಟೋಬರ್ 2ರ ಸಬ್ಬತ್ತಿಗೆ ಸಿದ್ಧಪಡಿಸಿಕೊಳ್ಳಿರಿ.

ಅದಕ್ಕೆ ಅವನು ಅದು ರಷ್ಯಾವನ್ನು ಕುರಿತು ಬರೆದಿದೆ ಎಂದರು.

ನಾವು ಧರ್ಮೋಪದೇಶಕಾಂಡಕ್ಕೆ ಬರುವ ಮೊದಲು ಒಂದು ವಾರದ ಪಾಠದಲ್ಲಿ ಸಾವಿರಾರು ವರ್ಷಗಳ ಇತಿಹಾಸವನ್ನು ಒಳಗೊಳ್ಳುವುದು ಸ್ವಲ್ಪ ಮಟ್ಟಿಗೆ ಅದೇ ಕೆಲಸವನ್ನು ಮಾಡುವುದು. ಆದರೆ ಮುಖ್ಯಾಂಶಗಳ ಮೇಲೆ ಕೇಂದ್ರೀಕರಿಸುವ ಮೂಲಕ, ಈ ಪುಸ್ತಕವನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಬೇಕಾದ ಸನ್ನಿವೇಶವನ್ನು ನಾವು ನೋಡಬಹುದು.

**ಭಾನುವಾರ** **ಸೆಪ್ಟೆಂಬರ್ 26**

## ಪ್ರೀತಿ, ಪ್ರೀತಿಸಬೇಕು

1 ಯೋಹಾನನು 4:8 ಹೇಳುತ್ತೆ:– "ದೇವರು ಪ್ರೀತಿಸ್ವರೂಪಿಯು". ಈ ಮೂರು ಪದಗಳು ಎಷ್ಟೇ ಸರಳವಾದರೂ (ಗ್ರೀಕ್ ಭಾಷೆಯಲ್ಲಿ 4 ಪದಗಳು) ಅದರ ಹಿಂದೆ ಇರುವ ಅರ್ಥ ಬಹಳ ಆಳವಾಗಿದೆ. ಇದು ಬಹಳ ಆಳವಾದದ್ದು. ಅದನ್ನು ಅರ್ಥೈಸಿಕೊಳ್ಳಲು ಬಹಳ ಕಷ್ಟ. ದೇವರು ಪ್ರೀತಿಸುತ್ತಾನೆಂದು ಹೇಳುವುದಿಲ್ಲ ಅಥವಾ ದೇವರು ಪ್ರೀತಿಯನ್ನು ಪ್ರಕಟಿಸುತ್ತಾನೆ ಎಂದು ಹೇಳುವುದಿಲ್ಲ. ಅಥವಾ ದೇವರು ಪ್ರೀತಿಯನ್ನು ಅಭಿವ್ಯಕ್ತಪಡಿಸುತ್ತಾನೆಂದು ಹೇಳುವುದಿಲ್ಲ. ಆದರೆ ದೇವರು ಪ್ರೀತಿಸ್ವರೂಪಿ. ಅಂದರೆ ಪ್ರೀತಿ ದೇವರನ್ನು ತನ್ನನ್ನೇ ಗುರುತಿಸಿಕೊಳ್ಳುವಂತದ್ದು. ಪಾಪಕ್ಕೆ ಒಳಗಾದ ಮಾನವರಾಗಿ, ಕೆಲವು ಪೌಂಡ್‌ಗಳಷ್ಟು ಜೀವಕೋಶಗಳ ಮುದ್ದೆ ಹಾಗೂ ನಮ್ಮ ತಲೆಯಲ್ಲಿ ರಾಸಾಯನಿಕ ಒಳಗೊಂಡ ನಿಜಾಂಶಗಳನ್ನು ಗ್ರಹಿಸದಿರು, ದೇವರು ಪ್ರೀತಿ ಸ್ವರೂಪಿಯು ಎಂದು ಸಂಪೂರ್ಣವಾಗಿ ಗ್ರಹಿಸಲು ಸಾಧ್ಯವಿಲ್ಲ.

ಅದು ಶುಭ ಸಂದೇಶವೆಂದು ಗ್ರಹಿಸಲು ಮಾತ್ರ ಸಾಧ್ಯ. ಅದರ ಬದಲು ದೇವರು ಪ್ರೀತಿ ಸ್ವರೂಪಿ ಎಂಬುದನ್ನು ಬಿಟ್ಟು ದೇವರು ದ್ವೇಷ ಅಥವಾ ದೇವರು ಸೇಡು ತೀರಿಸುವವನು ಅಥವಾ ದೇವರು ತಾತ್ಸಾರದವನು ಎಂದರೆ ತನ್ನ ಬಗ್ಗೆ ಪ್ರಕಟಿಸಿಕೊಂಡಿದ್ದಾರೆ ಅದು ನಮ್ಮನ್ನು ಚಿಂತೆಗೆ ಒಳಪಡಿಸುತ್ತಿತ್ತು.

ಆದರೆ ಸತ್ಯ ಏನೆಂದರೆ "ದೇವರು ಪ್ರೀತಿಸ್ವರೂಪಿಯು". ಇದು ಉತ್ತಮವಾದ ದೇವರ ಸರ್ಕಾರ ಎಂದು ಒಂದು ಸಲಹೆ ಕೊಡುತ್ತದೆ. ಎಲ್ಲಾ ಸೃಷ್ಟಿಯನ್ನು ಹೇಗೆ ಪರಿಪಾಲಿಸುತ್ತಾನೆ ಎಂದು ಈ ಪ್ರೀತಿಯ ಪ್ರತಿಬಿಂಬಿಸುತ್ತದೆ. ಗುರುತ್ವಾಕರ್ಷಣ ಶಕ್ತಿಯಿಂದ ಪ್ರೀತಿಯು ನಮ್ಮ ಲೋಕವನ್ನು ವ್ಯಾಪಿಸಿದೆ. ದೇವರು ನಮ್ಮನ್ನು

ಪ್ರೀತಿಸುತ್ತಾನೆ, ನಾವು ದೇವರನ್ನು ಹಿಂದಿರುಗಿ ಪ್ರೀತಿಸತಕ್ಕದ್ದು (ಧರ್ಮೋಪದೇಶಕಾಂಡ 6:5; ಮಾರ್ಕ 12:30).

ಪ್ರೀತಿಯು ಪ್ರೀತಿಯಾಗಬೇಕಾದರೆ ಅದನ್ನು ಧಾರಾಳಾವಾಗಿ ಕೊಡತಕ್ಕದ್ದು. ದೇವರು ಪ್ರೀತಿಯನ್ನು ಬಲವಂತಪಡಿಸುವುದಿಲ್ಲ. ಆತನು ಬಲವಂತಪಡಿಸಿದರೆ, ಅರ್ಪಣೆಯಿಂದಲೇ ಅದು ಪ್ರೀತಿಯಾಗುವುದಿಲ್ಲ. ದೇವರು ಬುದ್ಧಿ ಜೀವಿಗಳನ್ನು ಮತ್ತು ವೈಚಾರಿಕ ಜೀವಿಗಳನ್ನು ಭೂಲೋಕದಲ್ಲಿ ಮತ್ತು ಪರಲೋಕದಲ್ಲಿ ಸೃಷ್ಟಿಸಿದಾಗ ಅವರಿಗೆ ಪ್ರೀತಿಸುವ ಸಾಮರ್ಥ್ಯವನ್ನು ಕೊಟ್ಟಾಗ ಅಪಾಯ ಸಂಭವಿಸುವ ಸಾಧ್ಯತೆ ಇತ್ತು ಅದೇನೆಂದರೆ ಮತ್ತೆ ಅವರು ಹಿಂದಿರುಗಿ ಆತನನ್ನು ಪ್ರೀತಿಸದಿರುವುದು ಸಾಧ್ಯವಿತ್ತು. ಕೆಲವರು ಪ್ರೀತಿಸಲಿಲ್ಲ– ಆದುದರಿಂದ ಮಹಾಹೋರಾಟವು ಅಸ್ತಿತ್ವಕ್ಕೆ ಬಂದಿತು.

ಸ್ವತಂತ್ರದ ಸನ್ನಿವೇಶದಲ್ಲಿ ಹಾಗು ಪ್ರೀತಿಯನ್ನು ಒಳಗೊಂಡ ಅಪಾಯದಿಂದ ಈ ವಚನಗಳು ಯಾವ ಅರ್ಥವನ್ನು ಕೊಡುತ್ತದೆ? (ಯೆಶಾಯ 14:12–14, ಯೆಹೆಜ್ಕೇಲನು 28:12–17, ಪ್ರಕಟನೆ 12:7).

ಯೆಹೆಜ್ಕೇಲ 28:15 ವಿಶೇಷವಾಗಿ ಒಳನೋಟದಲ್ಲಿ ತೋರಿಸುವುದೇನೆಂದರೆ ಆ ದೂತನು ಉದಯದ ಮಗನು (ಲೂಸಿಫರ್) ಪರಿಪೂರ್ಣ ದೇವರು ಸೃಷ್ಟಿಸಿದರೂ ಆತನ ನಡತೆಯು ನಿರ್ದೋಷವಾಗಿತ್ತು. ಸೃಷ್ಟಿಸಲ್ಪಟ್ಟಿದ್ದ ಅಪರಾಧವು ಆತನಲ್ಲಿ ಕಂಡುಬರುವ ತನಕ ಪ್ರಾರಂಭದಲ್ಲಿ ಆ ದೂತನಲ್ಲಿ ಅಪರಾಧ ಇರಲಿಲ್ಲ. ಆದರೆ ಪ್ರೀತಿಸುವ ಸಾಮರ್ಥ್ಯವನ್ನು ಸೃಷ್ಟಿಯಲ್ಲಿ ಹೊಂದಿದ್ದ ಲೂಸಿಫರ್‌ನಿಗೆ, ನೈತಿಕ ಸ್ವಾತಂತ್ರ್ಯವು ಇತ್ತು. ನವರತ್ನಗಳಿಂದ ಭಷಿತವಾಗಿದ್ದ, ಆದರೆ ಈ ದೂತನಿಗೆ ಇನ್ನೂ ಹೆಚ್ಚು ಬೇಕು. ಒಂದು ವಿಷಯ ಮತ್ತೊಂದು ವಿಷಯಕ್ಕೆ ನೆಡಿಸಿತು. ಅನಂತರ "ಪರಲೋಕದಲ್ಲಿ ಯುದ್ಧ ನಡೆಯಿತು".

ಕೆಲವು ಸ್ಥಳಗಳಲ್ಲಿ ಯಂತ್ರ ನಾಯಿಗಳನ್ನು ಖರೀದಿಸಬಹುದು. ಅದು ನಿಮ್ಮ ಆಜ್ಞೆಗಳನ್ನು ಪಾಲಿಸುತ್ತವೆ, ನಿಮ್ಮ ಸ್ಥಳವನ್ನು ಗಲೀಜು ಮಾಡುವುದಿಲ್ಲ, ನಿಮ್ಮ ಸೋಫವನ್ನು ತಿನ್ನುವುದಿಲ್ಲ. ಅಂಥಹ ನಾಯಿಯೊಂದಿಗೆ ಯಾವುದಾದರೂ ಸಂಬಂಧ ಬೆಳಸಬಹುದೆ? ಅದಕ್ಕಾಗಿಯೇ ದೇವರು ತನ್ನನ್ನು ಹಿಂದಿರುಗಿಸಿ ಪ್ರೀತಿಸುವ ಮಾನವರನ್ನು ಬಯಸಿದ.

**ಸೋಮವಾರ** **ಸೆಪ್ಟೆಂಬರ್ 27**

# ಬೀಳುವಿಕೆ ಮತ್ತು ಜಲಪ್ರಳಯ

ಪ್ರತಿಯೊಂದು ಶಾಲೆಯ ಮಕ್ಕಳು ಐಸಾಕ್ ನ್ಯೂಟನ್ ಮತ್ತು ಆತನ ಮಡದಿ ವೈಯೋಲ ತಲೆಯ ಮೇಲೆ ಬಿದ್ದ ಸೇಬು ಹಣ್ಣಿನ ಕಥೆಯನ್ನು ಕೇಳಿದ್ದಾರೆ. ನ್ಯೂಟನ್ ಗುರುತ್ವಾಕರ್ಷಣೆಯನ್ನು ಕಂಡುಹಿಡಿದನು.

ಅವನ ತಲೆಯ ಮೇಲೆ ಸೇಬು ಬಿತ್ತೋ ಇಲ್ಲವೋ ಮುಖ್ಯವಾದ ಅಂಶವಲ್ಲ. ಆದರೆ ಮುಖ್ಯ ಅಂಶವೇನೆಂದರೆ ನ್ಯೂಟನ್ ಶ್ರೇಷ್ಠವಾದ ಒಳನೋಟ. ಆ ಸೇಬನ್ನು ಬೀಳಿಸಿದ ಗುರುತ್ವ ಶಕ್ತಿ ಆಕಾಶದಲ್ಲಿರುವ ಚಂದ್ರನನ್ನು ತನ್ನ ಪಥದಲ್ಲಿ ಭೂಮಿ ಸುತ್ತ ಚಲಿಸುತ್ತದೆ. ಭೂಮಿ ತನ್ನ ಪಥದಲ್ಲಿ ಸೂರ್ಯನ ಸುತ್ತ ಹೋಗುತ್ತದೆ.

ಇದು ಬಹಳ ಮುಖ್ಯವಾಗಿತ್ತು, ಯಾಕೆಂದರೆ ಸಾವಿರಾರು ವರ್ಷಗಳ ತನಕ ಅನೇಕ ಜನರು ಆಕಾಶವನ್ನು ನಿಯಂತ್ರಿಸುವ ಶಕ್ತಿ ಮತ್ತು ಭೂಮಿಯನ್ನು ನಿಯಂತ್ರಿಸುವ ಶಕ್ತಿ ಬೇರೆ ಎಂದು ಭಾವಿಸಿದರು. ನ್ಯೂಟನ್ ಇದು ತಪ್ಪು ಭಾವನೆ ಎಂದು ತೋರಿಸಿದರು. ನ್ಯೂಟನ್ ಕೊಡುಗೆ ಪ್ರಕೃತಿಯ ನಿಯಮದಲ್ಲಿ ಹೇಗೆ ಇದೆಯೋ ಹಾಗೆ ಅದೇ ತತ್ವ ನೈತಿಕ ನಿಯಮದಲ್ಲೂ ಇದೆ. ಅದೇ ಸ್ವಾತಂತ್ರ್ಯವು. ಪ್ರೀತಿಯಲ್ಲಿರುವ ಸ್ವಾತಂತ್ರ್ಯವು ಕಾಯಂ ಆಗಿದೆ. ಇದು ಲೂಸಿಫರ್‌ನನ್ನು ಪರಲೋಕದಿಂದ ಬೀಳಿಸಲು ಹೇಗೆ ನಡಿಸಿತೋ ಹಾಗೆಯೇ ಮಾನವನು ಈ ಲೋಕದಲ್ಲಿ ಬಿದ್ದನು.

ಆದಿಕಾಂಡ 2:16,17 ಮತ್ತು ಆದಿಕಾಂಡ 3:1–7 ನ್ನು ಓದಿರಿ. ಈ ವಚನಗಳಲ್ಲಿ ಪರಿಪೂರ್ಣ ದೇವರು ಸೃಷ್ಟಿಸಿದ. ಪರಿಪೂರ್ಣ ಜನರು ಮತ್ತು ಪರಿಪೂರ್ಣ ಪರಿಸರದಲ್ಲಿ ಪ್ರಬಲವಾದ ಸತ್ಯವನ್ನು ಅಂದರೆ ಪ್ರೀತಿಯಲ್ಲಿ ಸ್ವಾತಂತ್ರ್ಯವನ್ನು ಹೇಗೆ ಬಹಿರಂಗಪಡಿಸುತ್ತದೆ?

ಬೀಳುವಿಕೆಯ ನಂತರ ಕೆಟ್ಟತನದಿಂದ ಅತ್ಯಂತ ಕೆಟ್ಟದಾಗಿ ಹೋಯಿತು. ಎಲ್ಲಿಯ ತನಕವೆಂದರೆ, ಕರ್ತನು ಮನುಷ್ಯರನ್ನು ಕುರಿತು ಹೇಳಿದ್ದು ಆದಿಕಾಂಡ 6:5ರಲ್ಲಿ "ಅವರ ಹೃದಯದಲ್ಲಿ ಯೋಚಿಸುವುದೆಲ್ಲವೂ ಯಾವಾಗಲೂ ಬರೀ ಕೆಟ್ಟದ್ದಾಗಿತ್ತು" ಅವರ ಆಲೋಚನೆ ಕೆಟ್ಟದಾಗಿದ್ದರೆ ಅವರ ಕಾರ್ಯಗಳು ಕೆಟ್ಟದಾಗಿರುತ್ತೆ. ಎಷ್ಟು ಕೆಟ್ಟು ಹೋಯಿತೆಂದರೆ ಕರ್ತನು ಇಡೀ ಲೋಕವನ್ನು ಜಲಪ್ರಳಯದಿಂದ ನಾಶ

ಮಾಡಿದ. ಮತ್ತೆ ಮಾನವರಿಗೆ ಪುನರ್ ಆರಂಭ ಮಾಡುವಾಗ ಅಂದರೆ ಎರಡನೆಯ ಸೃಷ್ಟಿ. ಬಾಬೆಲ್ ಗೋಪುರದ ಕಥೆಯ ತೋರಿಸುವ ಹಾಗೆ (ಆದಿ 11:1–9) ಮನುಷ್ಯರು ದೇವರಿಗೆ ದ್ರೋಹ ಮಾಡುತ್ತಿದ್ದರು. ಆ ಗೋಪುರ ಅಪೂರ್ಣವಾಗಿ ಕಟ್ಟಿದ ನಂತರ ಕೆಲವು ಭಾಗದಲ್ಲಿ ಕಟ್ಟುವ ಜನರು ವಾಸ ಮಾಡಿದರು. ಇನ್ನು ಕೆಲವು ಕೊಠಡಿಗಳು ಬಹಳವಾಗಿ ಅಲಂಕಾರಗೊಂಡ ಕೊಠಡಿಗಳನ್ನೂ ತಮ್ಮ ದೇವತೆಗಳಿಗೆ ಪ್ರತಿಷ್ಠೆ ಮಾಡಿದರು. "ಜನರು ತಮ್ಮ ಯಶಸ್ಸಿನಲ್ಲಿ ಆನಂದಿಸಿ ಬೆಳ್ಳಿ ಮತ್ತು ಬಂಗಾರದ ಮೂರ್ತಿಗಳನ್ನು ಸ್ತುತಿಸಿದರು; ಭೂಮಿ ಮತ್ತು ಆಕಾಶದ ದೊರೆಗೆ ವಿರುದ್ಧವಾಗಿ (ಇ.ಜಿ. ವೈಟ್, ಪೇಟ್ರಿಯಾರ್ಕ್ಸ್ ಮತ್ತು ಪ್ರಾಫೆಟ್ಸ್, ಪುಟ 119). ದೇವರು ಅವರ ಭಾಷೆಯನ್ನು ತಳಮಳಗೊಳಿಸಿ, ಬೀಳಲ್ಪಟ್ಟ ಜನರನ್ನು ಭೂಮಿ ಎಲ್ಲಾ ಕಡೆ ಹರಡಿದನು.

**ಮಂಗಳವಾರ** **ಸೆಪ್ಟೆಂಬರ್, 28**

## ಅಬ್ರಹಾಮನ ಕರೆಯುವಿಕೆ

ಬಾಬೆಲ್ ಗೋಪುರದಿಂದ ಹರಡಿದ ಜನರಿಂದ ಅಬ್ರಾಮನು ಪ್ರಥಮವಾಗಿ ಆದಿಕಾಂಡ 11ನೇ ಅಧ್ಯಾಯದಲ್ಲಿ ಕಂಡುಬರುವ ವಂಶಾವಳಿಯ ಪಟ್ಟಿಯಲ್ಲಿ ಕಾಣುತ್ತೇವೆ.

ಆದಿಕಾಂಡ 12:1–3 ಓದಿ. ದೇವರು ಅಬ್ರಾಮನನ್ನು ಕರೆದದ್ದು. ಇಂದು ಕೃಜೆಯ ನಂತರ ನೋಡಿದರೆ ಕ್ರಿಸ್ತನ ಮರಣದ ನಂತರ ಸುವಾರ್ತೆ ಹರಡುವುದನ್ನು ನೋಡುವಾಗ ಅಬ್ರಹಾಮನ ಮೂಲಕ ದೇವರು ಮಾಡಿದ ವಾಗ್ದಾನವನ್ನು ಅರ್ಥೈಸಿಕೊಳ್ಳುವುದು ಹೇಗೆ?

ಅನೇಕ ಶತಮಾನಗಳ ನಂತರ ಅಪೋಸ್ತಲನಾದ ಪೌಲನು ಗಲಾತ್ಯದವರಲ್ಲಿ ನಡೆಯುವ ಪಾಷಂಡವನ್ನು ಕುರಿತು ಅಬ್ರಹಾಮನ ಕರಿಯುವಿಕೆಯಿಂದ ದೇವರ ಉದ್ದೇಶವೇನೆಂದು ತಿಳಿಯಬಹುದು: ಲೋಕಕ್ಕೆ ಸುವಾರ್ತೆ ಸಾರತಕ್ಕದ್ದು "ಆದುದರಿಂದ ನಂಬಿಕೆಯಲ್ಲಿರುವವರು ಮಾತ್ರ ಅಬ್ರಹಾಮನ ಮಕ್ಕಳು ಸತ್ಯವೇದವು ಅದನ್ನು ಮುನ್ ತಿಳಿದು, ದೇವರು ಅನ್ಯಜನರನ್ನು ನಂಬಿಕೆಯಿಂದಲೇ ನೀತಿವಂತರೆಂದು ನಿರ್ಣಯಿಸಿದರು. ಮುಂದಾಗಿಯೇ ಅಬ್ರಾಹಾಮನಿಗೆ ಸುವಾರ್ತೆಯನ್ನು ಸಾರಿ ಹೇಳಿದ್ದೇನೆಂದರೆ : "ನಿನ್ನ ಮೂಲಕ ಎಲ್ಲಾ ಜನಾಂಗಗಳಲ್ಲಿ

ಅವರಿಗೆ ಆಶೀರ್ವಾದವುಂಟಾಗುವುದೆಂದು ತಿಳಿಸಿದೆ. ನಂಬಿಕೆ ಇಟ್ಟವರು ಅಬ್ರಾಹಾಮನ ಹಾಗೆ ಆಶೀರ್ವಾದ ಹೊಂದುವರು (ಗಲಾತ್ಯ 3:7–9).

ಆದಿಕಾಂಡ 12ನೇ ಅಧ್ಯಾಯದಲ್ಲಿ ಅಬ್ರಾಹಾಮನ ಮೊದಲನೇ ಕರೆಯುವಿಕೆ ತಿಳಿದುಬಂದಿದೆ. ಮಿಕ್ಕ ಆದಿಕಾಂಡ ಪುಸ್ತಕದಲ್ಲಿ ಆತನ ರಕ್ತಸಂಬಂಧಿಗಳ ವಂಶಸ್ಥ ಶಿಷ್ಟಾಚಾರಗಳನ್ನು ಅನುಸರಿಸದ ಬೀಜಗಳು ಒಬ್ಬರ ನಂತರ ಒಬ್ಬರು ಕುಲಗೆಡಿಸಿ ಕುಟುಂಬಗಳಲ್ಲಿ ವಾಗ್ದಾನವನ್ನು ನೆರವೇರಿಸಿ ಕೊನೆಗೆ ಮೋಶೆಯ ಕರೆಯುವಿಕೆ ಬಂತು.

ಅಪೋಸ್ತಲರ ಕೃತ್ಯ 7:20–26 ಓದಿರಿ. ರಕ್ತ ಸಾಕ್ಷಿಯಾದ ಸ್ತೇಫನನು ವಿವರಿಸಿದ ಮೋಶೆ ಮತ್ತು ವಿಮೋಚನ (ಬಿಡುಗಡೆ) ಇದು ಹೇಗೆ ಅಬ್ರಾಹಾಮನ ಪ್ರಥಮ ವಾಗ್ದಾನಕ್ಕೆ ಸಮವಾಗಿದೆ?

ಸತ್ಯದ ಜ್ಞಾನವಿಲ್ಲದ ಲೋಕದಲ್ಲಿ ದೋಷ ಮತ್ತು ಅಜ್ಞಾನದಿಂದ ತುಂಬಿದೆ (ಮೂರು ಸಾವಿರ ವರ್ಷಗಳಿಂದ ಹೆಚ್ಚು ಬದಲಾವಣೆ ಆಗಿಲ್ಲ. ಹೌದಲ್ಲವೆ?) ಅಬ್ರಾಹಮನ ಸಂತತಿಯನ್ನು ಐಗುಪ್ತದಿಂದ ಕರ್ತನು ಕರೆದು ಜನರನ್ನು ನನ್ನ ಜನರೆಂದನು. ಅವರಿಂದ ತನ್ನ ಸತ್ಯದ ಜ್ಞಾನವನ್ನು ಆತನ ಬಗ್ಗೆ ಜ್ಞಾನ, ಯೆಹೋವಾ ಮತ್ತು ರಕ್ಷಣೆ ಯೋಜನೆಯು ಉಳಿಸಲು ಮಾತ್ರವಲ್ಲದೆ ಈ ಜ್ಞಾನವನ್ನು ಮಿಕ್ಕ ಲೋಕಕ್ಕೆ ಹರಡಲು ಬಯಸಿದ.

**ಬುಧವಾರ** **ಸೆಪ್ಟೆಂಬರ್, 29**

## ಸಿನಾಯಿ ಬೆಟ್ಟದ ಮೇಲೆ ಒಡಂಬಡಿಕೆ

ಐಗುಪ್ತದಿಂದ ಬಿಡುಗಡೆ ಮತ್ತು ರಕ್ತವನ್ನು ನಿಲುವು ಪಟ್ಟಿಗಳ ಮೇಲೆ ಹಚ್ಚಿರುವುದರಿಂದ ಕೆಂಪು ಸಮುದ್ರದಲ್ಲಿ ನಡೆದ ಡ್ರಾಮ ಎಂಥಾ ಅನುಭವ! ಆಗಿನ ಕಾಲದಲ್ಲಿ ಇದ್ದವರ ಮನಸ್ಸಿನಲ್ಲಿ ದೊಡ್ಡ ಪ್ರಭಾವ ಬೀರಿರುವುದರಲ್ಲಿ ಸಂದೇಹವಿಲ್ಲ (ಅಂದು ಐಗುಪ್ತ ದೇಶದಿಂದ ಚೊಚ್ಚಲು ಮಕ್ಕಳು ಸತ್ತವರಿಂದ ಕೆಂಪು ಸಮುದ್ರದಲ್ಲಿ ಮುಳುಗಿದ ಸಿಪಾಯಿಗಳನ್ನು ದೇವರು ಅವರೆಲ್ಲರಿಗೂ ನಿಷ್ಪಕ್ಷಪಾತವಾಗಿ ನ್ಯಾಯ ಒದಗಿಸುವನು. ಕರ್ತನು ಹೇಳಿದ ಹಾಗೆ ವಿಮೋಚನಕಾಂಡ 19:4ರಲ್ಲಿ "ನಾನು ಐಗುಪ್ತರಿಗೆ ಏನು ಮಾಡಿದೆನೋ ಹದ್ದು ತನ್ನ ಮರಿಗಳನ್ನು

ರೆಕ್ಕೆಗಳ ಮೇಲೆ ಹೊತ್ತು ಕೊಳ್ಳುವಂತೆ ನಾನು ನಿಮ್ಮನ್ನು ಹೊತ್ತುಕೊಂಡು ನನ್ನ ಸ್ಥಳಕ್ಕೆ ಹೇಗೆ ಸೇರಿಸಿದೆನೋ ಇದನ್ನೆಲ್ಲಾ ನೀವು ನೋಡಿದ್ದೀರಷ್ಟೇ".

ಕರ್ತನು ಯಾಕೆ ಇಂಥಾ ಆಘಾತಕಾರವಾಗಿ ಮತ್ತು ಪ್ರಹಸನಾತ್ಮಕವಾಗಿ ಬಿಡುಗಡೆ ಮಾಡಿದ; ಒಂದು ರಾಷ್ಟ್ರವನ್ನು ಮತ್ತೊಂದು ರಾಷ್ಟ್ರದಿಂದ ಅಥವಾ ಮೋಶೆ ತಾನೆ ಅವರಿಗೆ ಹೇಳಿದ ಹಾಗೆ "ಬೇರೆ ಯಾವ ದೇವರಾದರೂ ಮನಶೋಧನೆ, ಮಹತ್ಕಾರ್ಯ, ಉತ್ಪಾತ, ಯುದ್ಧ, ಭುಜಪರಾಕ್ರಮ, ಶಿಕ್ಷಹಸ್ತ ಮಹಾಭೀತಿ ಇವುಗಳನ್ನು ಪ್ರಯೋಗಿಸಿ ಒಂದು ಜನಾಂಗವನ್ನು ಮತ್ತೊಂದು ಜನಾಂಗದ ಕೈಯೊಳಗಿಂದ ತಪ್ಪಿಸುವುದಕ್ಕೆ ಪ್ರಯತ್ನಿಸಿದ್ದುಂಟೋ? ನಿಮ್ಮ ದೇವರಾದ ಯಹೋವನಾದರೋ ಐಗುಪ್ತದೇಶದಲ್ಲಿ ನಿಮಗೋಸ್ಕರ ಇದನ್ನೆಲ್ಲಾ, ನಿಮ್ಮ ಕಣ್ಣಿಗೆದುರಾಗಿ ನಡಿಸದನಲ್ಲಾ" (ಧರ್ಮೋಪದೇಶಕಾಂಡ 4:34) ವಿಮೋಚಾಕಾಂಡ 19:4–8 ಓದಿ ಕರ್ತನು ಜನರನ್ನು ಐಗುಪ್ತದಿಂದ ಯಾಕೆ ಹೊರಗೆ ಕರೆದನು?

ಅದು ಅಷ್ಟೇ ಸರಳವಾಗಿತ್ತು. ಅಬ್ರಾಹಾಮ್ ಇಸಾಕ್ ಮತ್ತು ಯಾಕೋಬ್ ಈ ತಂದೆಗಳ ಸಂತಾನವನ್ನು ದೇವರು ಅವರನ್ನು ಹೊರಗೆ ಕರೆದನು ಅದು ಅಷ್ಟೇ ಸರಳವಾಗಿತ್ತು. ಈ ಸಂತಾನದವರೊಂದಿಗೆ ಕರ್ತನು ತನ್ನ ಒಡಂಬಡಿಕೆಯನ್ನು ಸ್ಥಾಪಿಸಿದ, ಅವರು ಆತನಿಗೆ "ನೀವು ಎಲ್ಲಾ ಜನಾಂಗಗಳಲ್ಲಿ ನನಗೆ ಸ್ವಕೀಯ ಜನರಾಗುವಿರಿ, ಸಮಸ್ತ ಭೂಮಿಯೂ ನನ್ನದಷ್ಟೆ". ವಿಮೋಚನಕಾಂಡ 19:5. ಈ ಸಂಬಂಧವು ಒಡಂಬಡಿಕೆಗೆ ಮೂಲವಾಗಿತ್ತು. "ವಿಶೇಷ ಜನಾಂಗ" ಎಂಬ ಆಲೋಚನೆಯು ಹೇಗೆ ಅಪಾರ್ಥವಾಯಿತು. ಅವರ ವಿಶೇಷತನವು ಅವರು ಪವಿತ್ರತನದಿಂದಾಗಲಿ ಅಥವಾ ಅವರ ನೀತಿವಂತಿಕ್ಕೆದಾಗಲಿ ಬಂದದಲ್ಲ. ಅದು ದೇವರು ಅವರಿಗೆ ಕೊಟ್ಟ ಕೃಪೆ ಹಾಗೂ ಅವರಿಗೆ ಅದ್ಭುತವಾದ ಸತ್ಯವನ್ನು ದಯಪಾಲಿಸಿ ಆ ಸತ್ಯವನ್ನು ಅವರು ಅನುಸರಿಸಿ ಮತ್ತು "ಯಾಜಕರರಾಜ್ಯವಾಗಿ" ಇಡೀ ಲೋಕಕ್ಕೆ ಹರಡತಕ್ಕದ್ದು.

ದೇವರು ಈ ಒಡಂಬಡಿಕೆಗೆ ಕೆಲವು ಷರತ್ತನ್ನು ಕೊಟ್ಟನು. ಈ ಒಪ್ಪಂದದ ಕೊನೆಯಲ್ಲಿ ದಶಾಜ್ಞೆಗಳ ಮುಖಾಂತರ ಕಾಯಂ ಮಾಡಿದನು. ಹೊಸದಾಗಿ ಕಟ್ಟಿದ ಬಲಿಪೀಠದ ಮೇಲೆ ಯಜ್ಞಗಳ ರಕ್ತವನ್ನು ಪ್ರೋಕ್ಷಿಸಿ, ಮೋಶೆ ನಿಬಂಧದ

ಗ್ರಂಥವನ್ನು ತೆಗೆದುಕೊಂಡು ಜನರಿಗೆ ಕೇಳಿಸುವಂತೆ ಓದಿದನು". ವಿಮೋಚನಕಾಂಡ 24:7. ಜನರು ನಾವು ಅನುಸರಿಸಿ ವಿಧೇಯರಾಗಿರುವೆವು ಅಂದರು.

"ಮೋಶೆಯು ದೇವರ ವಿಧಿಗಳನ್ನೆಲ್ಲಾ ಧರ್ಮಶಾಸ್ತ್ರದ ಪ್ರಕಾರ ಜನರೆಲ್ಲರಿಗೆ ಹೇಳಿದ ಮೇಲೆ ರಕ್ತವನ್ನು ತೆಗೆದುಕೊಂಡು, ಗ್ರಂಥದ ಮೇಲೆಯೂ ಮತ್ತು ಜನರ ಮೇಲೆಯೂ ಪ್ರೋಕ್ಷಿಸಿ ಈಗೆಂದನು" ಇದು ದೇವರು ನಿಮಗೋಸ್ಕರ ವಿಧಿಸಿದ ಒಡಂಬಡಿಕೆಯ ರಕ್ತ" ಇಬ್ರಿಯರಿಗೆ 9:19,20.

ರಕ್ತವು ಏನನ್ನು ಸೂಚಿಸುತ್ತದೆ? ಮತ್ತು ಯಾಕೆ ಅದು ನಮಗೆ ಇಂದು ಮುಖ್ಯವಾಗಿದೆ?

**ಗುರುವಾರ** **ಸೆಪ್ಟೆಂಬರ್, 30**

## ಧರ್ಮಭ್ರಷ್ಟತೆ ಮತ್ತು ಶಿಕ್ಷೆ

"ಕರ್ತನು ಹೇಳಿದಂತೆಯೇ ಮಾಡುವೆವು" (ವಿಮೋಚನಕಾಂಡ 19:8 ಹಾಗೂ ವಿಮೋಚನಕಾಂಡ 24:3, ವಿಮೋಚನಕಾಂಡ 24:7 ಓದಿ). ಜನರು ಪ್ರತಿ ಸಾರಿ ಈ ವಾಕ್ಯಗಳನ್ನು ಅರ್ಥಗರ್ಭಿತವಾಗಿ ಹೇಳಿದಾಗಲೂ ಪವಿತ್ರ ಇತಿಹಾಸ ತೋರಿಸುವುದೇನೆಂದರೆ ದುರ್ದೈವಶ ಅವರ ಮಾತುಗಳು ಅವರ ಕ್ರಿಯೆಗಳಿಗೆ ವಿರುದ್ಧವಾಗಿತ್ತು. ಅವರು ಆರಿಸಲ್ಪಟ್ಟ ಜನಾಂಗವಾಗಿದ್ದಾಗ್ಯೂ ಕರ್ತನ ಸಂಗಡ ಒಡಂಬಡಿಕೆಗೆ ಒಳಗಾಗಿದ್ದಾಗ್ಯೂ ಕೊನೆ ತನಕ ಅವರು ಮಾತಿಗೆ ಬದ್ಧರಾಗಿರಲಿಲ್ಲ. ಇಸ್ರಾಯೇಲ್ಯರೊಡನೆ ಮಾಡಿಕೊಂಡ ಒಡಂಬಡಿಕೆಗೆ ಯಾವ ಅಂಗವು ನಿರ್ಣಾಯಕವಾಗಿತ್ತು? (ವಿಮೋಚನಕಾಂಡ 19:4,5).

ಈಗಿನ ಕಾಲದಾಗೆ, ದೇವರಿಗೆ ವಿದೇಯರಾಗುವ ಕರೆವಿಕೆಗೆ ಹಾಗು ಆತನ ಆಜ್ಞೆಗಳನ್ನು ಇಟ್ಟುಕೊಳ್ಳುವುದು ಅಂದು ಶಾಸನಬದ್ಧವಾಗಿರಲಿಲ್ಲ (ನೋಡಿ : ಮತ್ತಾಯ 7:24–27, ಯೋಹಾನ 14:15; ಯಾಕೋಬ 2:20, ರೋಮ 6:11,12). ಆದರೂ ಪದೇ ಪದೇ ಇಸ್ರಾಯೇಲ್ ಜನರು ಕೊಟ್ಟ ಮಾತಿಗೆ ತಪ್ಪಿದರು.

ಮುಂಚಿನಿಂದ ಅಂದರೆ ಸಿನಾಯಿ ಬೆಟ್ಟದದಿಂದಲೇ, ಅವರು ಧರ್ಮಭ್ರಷ್ಟತೆಗೆ ಬಿದ್ದರು (ವಿಮೋಚನಕಾಂಡ 32:1–6 ನೋಡಿ). ದುರ್ದೈವವೆಂದರೆ, ಅಪನಂಬಿಗಸ್ತಿಕೆಯು ಅಂದಿನ ಮಾದರಿಯಾಗಿತ್ತು. ವೇಗವಾಗಿ ವಾಗ್ದಾನ ದೇಶಕ್ಕೆ

ಪ್ರವೇಶವಾಗುವ ಬದಲು, ಅವರು ಅರಣ್ಯದಲ್ಲಿ 40 ವರ್ಷಗಳು ಅಲೆದಾಡಿದರು.

ಅರಣ್ಯಕಾಂಡ 14:28–35 ಓದಿ. ಅವರು ಕರ್ತನ ಮಾತನ್ನು ಕೇಳದೆ ಆತನ ಮೇಲೆ ಭರವಸೆ ಇಡಲು ನಿರಾಕರಿಸಿದರಿಂದ, ಯಾವ ಶಿಕ್ಷೆಯನ್ನು ಅನುಭವಿಸಬೇಕಾಯಿತು?

ಇಂದಿನಕಾಲದ ಹಾಗೆ ಅಂದು ಅವಿದೇಯತ್ವವು ಬರುವುದು ನೇರವಾಗಿ ದಂಗೆ ಏಳುವುದರಿಂದಲ್ಲ (ಕೆಲವು ಬಾರಿ ಹಾಗೆ ಆಗಬಹುದು). ಆದರೆ ದೇವರು ಹೇಳಿರುವುದರ ಮೇಲೆ ಭರವಸೆ ಇಡಲು ನಿರಾಕರಿಸುವುದರಿಂದ ಇಸ್ರಾಯೇಲ್ಯರಿಗೆ ಪಾಪವನ್ನು ಘೋರವಾಗಿ ಮಾಡಿದ್ದು ಯಾವುದೆಂದರೆ ದೇವರೇ ತಾನೇ ಹೇಳಿದ್ದಾನೆ: "ಈ ಮನುಷ್ಯರೆಲ್ಲರೂ ಐಗುಪ್ತದೇಶದಲ್ಲಿಯೂ, ಅರಣ್ಯದಲ್ಲಿಯೂ, ನಾನು ನಡಿಸಿರುವ ಮಹತ್ಕಾರ್ಯಗಳನ್ನೂ ನನ್ನ ಮಹಿಮೆಯನ್ನೂ ನೋಡಿದರೂ ನನ್ನ ಮಾತಿಗೆ ಪದೇ ಪದೇ ನನ್ನನ್ನು ಪರೀಕ್ಷಿಸಿದರು" (ಅರಣ್ಯಕಾಂಡ 14:22). ಇದೆಲ್ಲವನ್ನೂ ನೋಡಿದಾಗ್ಯೂ ಅನುಭವಿಸಿದಾಗ್ಯೂ ಅವರು ಕರ್ತನ ಮಾತನ್ನು ಕೇಳಲು ಮತ್ತು ದೇಶವನ್ನು ಪಡೆಯಲು ವಾಗ್ದಾನ ನೀವು ಜಯಗಳಿಸುವಿರಿ ಎಂದು ದೇವರು ಮಾಡಿದಾಗ್ಯೂ ನಿರಾಕರಿಸಿದರು. (ಅರಣ್ಯಕಾಂಡ 13–ಅರಣ್ಯಕಾಂಡ 14).

ಮೇಲೆ ಹೇಳಿದ ವಿಷಯಗಳನ್ನು ಚಿಂತಿಸಿರಿ : ಸಹಜವಾಗಿ ಅವಿಧೇಯತೆಯು ಬರುವುದು ದೇವರ ವಾಕ್ಯದ ಮೇಲೆ ನಾವು ಭರವಸೆ ಇಡದ ಕಾರಣ. ಇದು ಯಾಕೆ ಸತ್ಯ ಹೆಚ್ಚಾಗಿ ದೇವರ ಮೇಲೆ ಹೇಗೆ ಭರವಸೆ ಇಡಬಹುದು.

**ಶುಕ್ರವಾರ** **ಅಕ್ಟೋಬರ್ 1**

**ಹೆಚ್ಚಿನ ಚಿಂತನೆ :** ಇಸ್ರಾಯೇಲ್ಯರು ಕಾನನ ದೇಶವನ್ನು 40 ವರ್ಷಗಳ ತನ್ನ ಪ್ರವೇಶವಾಗಬಾರದೆಂಬ ಆಜ್ಞೆಯು ಮೋಶೆಗೂ ಮತ್ತು ಆರೋನನಿಗೂ ಮತ್ತು ಯೆಹೋಶುವನಿಗೂ ಒಂದು ಕಹಿ ನಿರಾಶವಾಯಿತು. ಗುಣುಗುಟ್ಟದೆ ದೇವರು ನಿರ್ಧಾರವನ್ನು ಅಂಗೀಕರಿಸಿದರು. ದೇವರ ನಡಿಸುವಿಕೆಯ ಬಗ್ಗೆ ದೂರುತ್ತ ಮತ್ತೆ ಅವರು ಐಗುಪ್ತಕ್ಕೆ ಹಿಂದಿರುಗಲು ಘೋಷಿಸಿದರು. ಅವರು ತಿರಸ್ಕರಿಸಿದ ಆಶೀರ್ವಾದವು ಅವರಿಂದ ತೆಗೆದ ಮೇಲೆ ಅವರು ದುಃಖಪಟ್ಟು ಗೋಳಾಡಿದರು. ವಿನಾಃ ಕಾರಣ ಅವರು ದೂರಿದರು. ಈಗ ದೇವರು ಅವರ ದುಃಖಕ್ಕೆ ಕಾರಣಕೊಟ್ಟರು ಅವರು ನಂಬಿಗಸ್ತರಾಗಿ ತಮ್ಮ ಪಾಪಕ್ಕಾಗಿ ದುಃಖಪಟ್ಟಿದ್ದರೆ ಈ ಆಜ್ಞೆಯು

ಹೊರಡುತ್ತಿರಲಿಲ್ಲ. ಆದರೆ ಅವರು ಆ ನ್ಯಾಯತೀರ್ಪಿಗೆ ದುಃಖಪಟ್ಟರು. ಅವರ ದುಃಖವು ಪಶ್ಚಾತಾಪವಾಗಿರಲಿಲ್ಲ. ಆ ತೀರ್ಪನ್ನು ಹಿಂದಿರುಗಿಸಲು ಸಾಧ್ಯವಾಗಲಿಲ್ಲ" (ಪೇಟ್ರಿಯಾರ್ಕ್ಸ್ ಮತ್ತು ಪ್ರಾಫೆಟ್ಸ್) ಎಲೆನ್ ಜಿ ವೈಟ್, ಪುಟ 392.